SRI N HUTCHMASTHY GOWDA (Minister for Revenue).—I wish to make the following's statement.

Small Savings is a voluntary scheme. The main object of the Small Savings Movement is to inculcate the habit of thrift and savings among the people. Compulsion of harassment is not an element of the Movement.

Enquiries made with the Deputy Commissioner, Mysore with reference to the alleged harassment by the Revenue Officers in Nanjanagud Taluk revealed that no such case of harassment his come to his notice. It is also reported that no scope has been given for such complaints and that Small Savings is being propogated with Voluntary Co-operation from the people and not under any pressure.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ಸ್ಮಾಲ್ ಸೇವಿಂಗ್ಸ್ ಮೇಲೆ ತಮ್ಮ ಸ್ಪೀಚ್ ಆಯಿತು; ಅಕ್ಟ್ಯುಯರ್ ಆಗಿ ಅಲ್ಲಿ ಹೆರಾಸ್‌ಮೆಂಟ್ ನಡೆಯುತ್ತಿದೆ. ನಂಜನಗೂಡಿನ ಅಸಿಸೆಂಟ್ ಕಮೀಷನರ್‌ರವರು ಮಧ್ಯಮ ವರ್ಗದ ರೈತರ ಮೇಲೆ ಪೀಸಾ ಉಪಯೋಗಿಸಿ ಸುಲಿಗೆ ಮಾಡುತ್ತಿದ್ದಾರೆ. ಡೆಪ್ಯುಟಿ ಕಮೀಷನರ್‌ರವರು ವಿಚಾರ ಮಾಡಿದ್ದಾರೆ; ಸುಲಿಗೆ ಆಗುತ್ತಾ, ಇಲ್ಲ ಎಂದು ಹೇಳಿದ್ದೀರಿ; ಸುಲಿಗೆ ಆಗುವ ವಿಚಾರವನ್ನು ತಮ್ಮ ಗಮನಕ್ಕೆ ತಂದರೆ; ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ಹುಚ್ಚಮಾಸಿ ಗೌಡ —ಬಲವಂತವಾಗಿ ಮಾಡಿದ್ದಾರೆಂದೂ, ಹಿಂಸೆ ಕೊಟ್ಟೆವ್ವಾರೆಂದೂ ರುಜುವಾತು ಆದರೆ ಅದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ.

Statement by the Minister for Social Welfare and Development

re : action taken by Government on the report of the Backward Commission Report.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ಹಿಂದುಳಿದ ವರ್ಗಗಳ ಆಯೋಗದವರು ತಮ್ಮ ವರದಿಯನ್ನು ಕೊಟ್ಟು ಸುಮಾರು ಮೂರು ತಿಂಗಳು ಆಯಿತು; ಈ ಬಗ್ಗೆ ಅಂದರೆ ವರದಿಯನ್ನು ಕಾರ್ಯಗತ ಮಾಡುವುದರಲ್ಲಿ ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆಂಬುದಕ್ಕೆ ದಯೆಯಿಟ್ಟು ಹೇಳಿಕೆ ನೀಡಬೇಕು.

† ಶ್ರೀ ಎನ್. ರಾಚಯ್ಯ —ಮಾನ್ಯ ಅಧ್ಯಕ್ಷರೇ, 19-11-1975ರಲ್ಲಿ ಹಿಂದುಳಿದ ವರ್ಗಗಳ ಆಯೋಗದ ವರದಿ ಸರ್ಕಾರದ ಕೈಸೇರಿತು. ಈ ವರದಿಯನ್ನು ನಾವು ಸರ್ಕಾರದ ಮುದ್ರಣಾಲಯಕ್ಕೆ ಕಳುಹಿಸಿದ್ದೇವೆ. ಇದು ಮೂರು ಸಾವಿರ ಪುಟ ಇರತಕ್ಕಂಥ ವರದಿ; ಇದರಲ್ಲಿ ನಾಲ್ಕು ವಾಲ್ಯೂಂಗಳು ಇವೆ; ಒಂದೊಂದು ವಾಲ್ಯೂಂ ಸಹ 675 ಪುಟ ಇವೆ; ಎರಡು ವಾಲ್ಯೂಂಗಳು ಮುದ್ರಿತವಾಗಿ ಸರ್ಕಾರಕ್ಕೆ ಬಂದಿವೆ; ಇನ್ನೂ ಕೂಡ ಎರಡು ವಾಲ್ಯೂಂಗಳು ಬರಬೇಕಾಗಿದೆ. ಮುದ್ರಣಾಲಯದ ಡೈರೆಕ್ಟರ್‌ರವರು ಶಾಸನಸಭಾ ಅಧಿವೇಶನ ನಡೆಯುವಾಗ ಕೆಲಸ ಹೆಚ್ಚಿಗೆ ಇರುವುದರಿಂದ ಸ್ವಲ್ಪ ತಡವಾಗುತ್ತದೆಂದು ಮೊದಲೇ ನಮ್ಮನ್ನು ಕೇಳಿದರು. ಈಗ ಸರ್ಕಾರ ಒತ್ತಾಯ ಮಾಡಿದ ಮೇಲೆ ಎರಡು ವಾಲ್ಯೂಂಗಳನ್ನು ಕಳುಹಿಸಿದ್ದಾರೆ; ಇನ್ನೂ ಎರಡು ವಾಲ್ಯೂಂಗಳಿಗೆ ಕನಿಷ್ಠ ಪಕ್ಷ ಮೂರು ವಾರಗಳು ಬೇಕಾಗುತ್ತದೆ ಎಂದು ಹೇಳಿದ್ದಾರೆ. ಆದಷ್ಟು ಜಾಗ್ರತೆ ಉಳಿದ ಎರಡು ವಾಲ್ಯೂಂಗಳನ್ನು ಕಳುಹಿಸಬೇಕೆಂದು ಒತ್ತಾಯ ಮಾಡಿದ್ದೇವೆ. ನಾಲ್ಕು ವಾಲ್ಯೂಂಗಳು ಸರ್ಕಾರದ ಕೈಸೇರಿದ ಮೇಲೆ ಸರ್ಕಾರ ಮಂತ್ರಿಮಂಡಲದಲ್ಲಿ ಇದ್ದು ಆಯೋಗದ ಪ್ರತಿಯೊಂದು ಶಿಫಾರಸ್ಸಿನ ವಿಚಾರವಲ್ಲೂ ಸೂಕ್ಷ್ಮ ಕ್ರಮ ತೆಗೆದುಕೊಂಡು ಹಿಂದುಳಿದ ವರ್ಗಗಳಿಗೆ ರಾಜ್ಯಾಂಗ ದತ್ತವಾದ ರಕ್ಷಣೆಯನ್ನು ಯಾವ ಯಾವ ಕ್ಷೇತ್ರದಲ್ಲಿ, ಯಾವ ಯಾವ ಸೆಕ್ಷನ್‌ಗಳಿಗೆ

ಅನ್ವಯಿಸುತ್ತದೋ ಅದನ್ನು ಸಂಪೂರ್ಣವಾಗಿ, ಸಮಗ್ರವಾಗಿ ಪರಿಶೀಲನೆ ಮಾಡಿ; ಬಹಳ ಆತುರದಿಂದ ಹಾಗೂ ಆಕಸ್ಮಿಯಿಂದ ಈ ವಿಚಾರದಲ್ಲಿ ನಾವು ತೀರ್ಮಾನವನ್ನು ತೆಗೆದುಕೊಂಡು ಜಾರಿಗೆ ಕೊಡುವಂತ ಪ್ರಾಮಾಣಿಕ ಪ್ರಯತ್ನವನ್ನು ಜರೂರಾಗಿ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ.—ಮಾನ್ಯ ಅಧ್ಯಕ್ಷರೇ, ಸರ್ಕಾರದವರು 1972ನೇ ಇಸವಿಯಲ್ಲಿ ಅಧಿಕಾರಕ್ಕೆ ಬಂದತಕ್ಷಣ ಹಿಂದುಳಿದ ವರ್ಗಗಳಿಗೆ ಏನೋ ಮಾಡುತ್ತೇವೆಂದು ಒಂದು ಆಯೋಗವನ್ನು ನಿರ್ಮಾಣ ಮಾಡಿದರು. ವಾಸ್ತವವಾಗಿ ಆಯೋಗ ಮಾಡಬೇಕಾದರೆ, ಇವರಿಗೆ ಸೀರಿಯಸ್‌ನೆಸ್ ಇರಲಿಲ್ಲ. ಜನಗಳ ಕಣ್ಣನ್ನು ಹೊರೆಸುವುದಕ್ಕಾಗಿ, ಆಯೋಗ ನಿರ್ಮಾಣ ಮಾಡಿ, ಆಯೋಗದ ಅಧ್ಯಕ್ಷರು ಮತ್ತು ಇತರೆಯವರು ಮೂರು ವರ್ಷ ಕಷ್ಟಪಟ್ಟು ವರದಿಯನ್ನು ತಯಾರು ಮಾಡಿ, 19ನೇ ನವೆಂಬರ್ 1975ರಲ್ಲಿ ಸರ್ಕಾರಕ್ಕೆ ಕೊಟ್ಟರು. ಸರ್ಕಾರದವರು ಆ ವರದಿಯನ್ನು ಇಟ್ಟುಕೊಂಡು ಅದರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳದೇ ಇವತ್ತು ಪ್ರಿಂಟಿಂಗ್ ಪ್ರೆಸ್ ಮೇಲೆ ಹೇಳುತ್ತಿದ್ದಾರೆ. ನಿಮಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಚೈಪ್ ಮಾಡಿದ ಕಾಪಿ ಇರಲಿಲ್ಲವೇ? ನಾನು ವಾಸ್ತವವಾಗಿ ಹೇಳುವುದಾದರೆ, ನಿಮಗೆ ಶಿಫಾರಸ್ಸಿನ ವಿಚಾರದಲ್ಲಿ ವಿಶ್ವಾಸವಿಲ್ಲ. ಜನಗಳ ಕಣ್ಣು ಹೊರೆಸುವುದಕ್ಕೆ ಆಯೋಗ ಮಾಡಿ, ಅದನ್ನು ಮೂಲೆಗೆ ತಳ್ಳಿದ್ದೀರಿ, ನಾನು ಕನಸಿದ ಬುಟ್ಟಿಗೆ ಹಾಕಿಬಿಟ್ಟಾರೆಂದು ಹೇಳುವುದಿಲ್ಲ. ಪ್ರೋರೇಜ್‌ನಲ್ಲಿ ಹಾಕಿದ್ದೀರಿ ಸರ್ಕಾರ ಆಯೋಗ ನಿರ್ಮಾಣ ಮಾಡಿದ ತಕ್ಷಣ ಕಾಲೇಜು ವಿದ್ಯಾರ್ಥಿಗಳು, ಜನಗಳೂ ಒಳ್ಳೆಯದು ಮಾಡುತ್ತಾರೆಂದೂ ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸುಮಾರು 25 ವರ್ಷಗಳಿಂದಲೂ ಆಗದೇ ಇದ್ದಂತ ಅನುಕೂಲವಾಗುತ್ತದೆಂದೂ, ಕಾಲೇಜುಗಳಲ್ಲಿ ಸೀಟುಗಳಿಗೆ ಮತ್ತಿತರ ವಿಚಾರದಲ್ಲಿ ತುಂಬಾ ಅನುಕೂಲವಾಗುತ್ತದೆಂದು ಭಾವಿಸಿದ್ದರು. ಹಿಂದುಳಿದ ವರ್ಗಗಳು 2ನೇ ವರ್ಷಗಳಿಂದ ಎಲ್ಲಿದ್ದವೋ ಈಗಲೂ ಅಲ್ಲಿಯೇ ಇದ್ದಾವೆ. ಪ್ರೋರೇನಲ್ಲಿದ್ದರೂ ಈಗಲೂ ಪ್ರೋರೇನಲ್ಲಿಯೇ ಇದ್ದಾರೆ ಸರ್ಕಾರ ಜೂನ್ ಒಳಗೆ ಶಿಫಾರಸ್ಸನ್ನು ಕಾರ್ಯಗತ ಮಾಡದೆ ಹೋದರೆ ಜನಗಳು ತಿರುಗಿ ಬೀಳುವ ಸಂದರ್ಭ ಇದೆ ಎಂದು ಎಚ್ಚರಿಕೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ತಾವು ಈ ಬಗ್ಗೆ ಏನು ಹೇಳುತ್ತೀರಿ? ಆಯೋಗ ವರದಿ ಪ್ರೋರೇಜ್‌ನಲ್ಲಿದೆಯೇ ದಯವಿಟ್ಟು ತಿಳಿಸಿ.

ಶ್ರೀ ಎನ್. ರಾಚಯ್ಯ.—ಈ ಆಯೋಗದ ಅಧ್ಯಕ್ಷರು ಮತ್ತು ಮಾನ್ಯ ಸದಸ್ಯರುಗಳು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಆದರಂತೆ ಶ್ರಮವನ್ನೂ ಪಟ್ಟಿದ್ದಾರೆ? ಸರ್ಕಾರ ಅವರಿಗೆ ಈಗಾಗಲೇ ಅಭಿನಂದನೆಯನ್ನು ಸಲ್ಲಿಸಿದೆ ಶ್ರೀಮಾನ್ ನಾಗಣ್ಣನವರು ಸಹಜವಾಗಿ ಮಾನಸಿಕ ತೀವ್ರತೆಯನ್ನು ತೋರಿಸಿಕೊಂಡಿದ್ದಾರೆ. ಹಿಂದುಳಿದ ವರ್ಗಗಳಿಗೆ ರಾಜ್ಯಾಂಗದತ್ತವಾಗಿ ಏನು ಅನುಕೂಲಗಳು ದೊರಕಬೇಕಾಗಿತ್ತೋ, ಅವು ದೊರಕುತ್ತಿಲ್ಲ ಎನ್ನುವುದನ್ನು ಮನಗಂಡೇ ಸರ್ಕಾರ ಆಯೋಗವನ್ನು ನೇಮಿಸಿದ್ದು. ಆಯೋಗ ವರದಿ ಮಾಡಬೇಕಾದರೆ ಮೂರು ವರ್ಷ ತೆಗೆದುಕೊಂಡಿದೆ ಈಗ ನಾವು ಈ ವರದಿಯನ್ನು ತಿರಸ್ಕರಿಸುವುದಾಗಲೀ, ಈ ಶಿಫಾರಸ್ಸುಗಳನ್ನು ಜಾರಿಗೆ ಕೊಡುವುದರಲ್ಲಿ ನಿಧಾನ ಮಾಡುವುದಾಗಲೀ ಸುತರಾಮು ಕೂಡ ಇಲ್ಲ. ಶ್ರೀಮಾನ್ ನಾಗಣ್ಣನವರು ಎಷ್ಟು ಕಾತರದಿಂದ ಇದ್ದಾರೋ, ಅದಕ್ಕಿಂತ ಹೆಚ್ಚು ಕಾತರದಿಂದ ಸರಸರ ಸರ್ಕಾರ ಇದ್ದು, ಬಹಳ ತೀವ್ರತೆಯಿಂದ ಈ ಶಿಫಾರಸ್ಸುಗಳನ್ನು ಕಾರ್ಯಗತಗೊಳಿಸುವುದರಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಆದರೆ ಈ ಆಯೋಗದವರು ಕೊಟ್ಟಂಥಾ 3000 ಪುಟದಷ್ಟು ವರದಿ ಏನು ಕೊಟ್ಟಿದ್ದಾರೋ ಅದು ಮತ್ತು ತಾವು ಹಿಂದೆ ಈ ಬಗ್ಗೆ ಕೊಚ್ಚಿಂಥಾ ನಾಗನಗೌಡ ಕಮಿಟಿ ರಿಪೋರ್ಟ್ ನಮಾರು 60-7 ಪುಟದಷ್ಟು ಕೊಟ್ಟಿರುವುದನ್ನು ನೋಡಿದ್ದೀರಿ ಅದು ಇವೆಲ್ಲವನ್ನೂ ಕೂಡ ಸಂಬಂಧಪಟ್ಟ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಪ್ರಿಂಟ್ ಮಾಡಿ ಈ ಎರಡೂ ವರದಿಗಳನ್ನೂ ಕೂಡ ಸರ್ಕಾರಕ್ಕೆ ತರಿಸಿಕೊಂಡು ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ನಾವು ಪ್ರಿಂಟಿಂಗ್ ಪ್ರೆಸ್ ಮೇಲೆ ಹೇಳುತ್ತಾ ಇಲ್ಲ. ಅವರು ಯಾವ ಘಳಿಗೆಯಲ್ಲಿ ಪ್ರಿಂಟ್ ಮಾಡಿ ನಮಗೆ ಕಳುಹಿಸುತ್ತಾರೋ ಅವಾಗ ಅದನ್ನು ಮಂತ್ರಿ ಮಂಡಲದ ಮುಂದೆ ಇಟ್ಟು ಮುಖ್ಯಮಂತ್ರಿಗಳ ಮುಂದೆ ಇಟ್ಟು ಅವರು ಹೇಳಿರುವ ಪ್ರತಿಯೊಂದು ವಿಚಾರವನ್ನು ಪರಿಶೀಲನೆ ಮಾಡಿ ಸಾಧ್ಯವಾದ ತೀರ್ಮಾನ ತೆಗೆದುಕೊಳ್ಳುತ್ತೇವೆ. ಹಿಂದುಳಿದ ವರ್ಗದ ಜನಗಳ ಬಗ್ಗೆ ಅದರಲ್ಲೂ ಕೂಡ ವಿದ್ಯಾರ್ಥಿಗಳಿಗೆ ಉದ್ಯೋಗಕ್ಕೆಂದು ಬಹುಸತಕ್ಕಂಥಾ

ಅಭ್ಯರ್ಥಿಗಳಿಗೆ ಯಾವ ವಿಧವಾದ ತೊಂದರೆಯೂ ಆಗದೇ ಇರತಕ್ಕಂಥಾ ರೀತಿಯಲ್ಲಿ ತೀರ್ಮಾನ ತೆಗೆದುಕೊಳ್ಳುವ ಹಾಗೆ ಸರ್ಕಾರ ನಿರ್ಣಯ ಮಾಡಿದೆ. ಆ ವರದಿಗಳು ಪ್ರಿಂಟ್ ಆಗಿ ಬಂದ ತಕ್ಷಣ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗಾಗಲೇ ಅನೇಕ ಕಡೆಗಳಲ್ಲಿ ನೇಮಕಾತಿ ವಿಷಯಗಳ ಬಗ್ಗೆ ೫೭ ಕಮಿಟಿಗಳನ್ನು ಮಾಡಿದ್ದೀರಿ. ಲೋಕ ಸೇವಾ ಆಯೋಗದವರೂ ಕೂಡ ಈ ಒಂದು ನೇಮಕಾತಿ ಬಗ್ಗೆ ತೊಡಗಿದೆ. ಹೀಗಿರುವಾಗ ಈ ವರದಿಗಳು ಪೂರ್ಣವಾಗಿ ಪ್ರಿಂಟ್ ಆಗಿ ಬರುವುದಕ್ಕೆ ಎಷ್ಟು ಅವರ ಬಗ್ಗೆ ಏನಾದರೂ ಒಂದು ತೀರ್ಮಾನ ತೆಗೆದುಕೊಳ್ಳಿ. ಅದು ಪ್ರಿಂಟ್ ಆಗಿ ಬರಬೇಕಾದರೆ ಇನ್ನು ೬ ತಿಂಗಳೋ ಒಂದು ವರ್ಷನೋ ಹಿಡಿಯುತ್ತದೆ. ಈ ದೃಷ್ಟಿಯಿಂದ ನಾನು ಹೇಳುವುದು ಆ ವರದಿಗಳು ಪ್ರಿಂಟ್ ಆಗಿ ಬರುವವರೆಗೆ ಹಿಂದುಳಿದ ವರ್ಗದವರಿಗೆ ಅದರಲ್ಲೂ ಕೂಡ ಉದ್ಯೋಗವನ್ನು ಬಯಸುತಕ್ಕಂಥಾ ವಿದ್ಯಾರ್ಥಿಗಳಿಗೆ ಮತ್ತು ಅವರ ಒಂದು ಎಜುಕೇಷನ್ ಬಗ್ಗೆ ಏನೇನು ಸೌಲಭ್ಯಗಳು ಬೇಕೋ ಅವನ್ನು ಜರೂರಾಗಿ ತಾತ್ಕಾಲಿಕವಾಗಿಯಾದರೂ ಅದರಲ್ಲಿ ಕೆಲವು ಭಾಗವನ್ನಾದರೂ ಪರಿಶೀಲನೆ ಮಾಡಿ ಆ ಒಂದು ಕಾರ್ಯಕ್ರಮವನ್ನಾದರೂ ಬೇಗನೆ ಜಾರಿಗೆ ತರುತ್ತೀರಾ ?

ಶ್ರೀ ಎನ್. ರಾಚಯ್ಯ.—ಈ ನಮಿತಿಗಳು ಮತ್ತು ಅವರ ನಲಹೆಗಳನ್ನು ಈ ವಿಚಾರದಲ್ಲಿ ಕೇಳಿ ತೀರ್ಮಾನ ತೆಗೆದುಕೊಂಡು ಮಾಡಬೇಕಾಗಿಲ್ಲ. ನಾವು ಈಗಾಗಲೇ ಹಿಂದುಳಿದವರ ಬಗ್ಗೆ ಒಂದು ಟೆಂಪರನ್ಸ್ ಬೋರ್ಡ್ ಅಂತ ಮಾಡಿದ್ದೇವೆ. ಆ ನಮಿತಿಯವರ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ನಾವೇನೂ ಕಾಯಬೆ ಕಾಗಿಲ್ಲ. ಆದರೆ ನಾವು ಹೇಳಿದ ಹಾಗೆ ಹಿಂದುಳಿದ ವರ್ಗದವರ ಬಗ್ಗೆ ಒಂದು ಉದ್ಯೋಗವಾಗಲಿ ಅಥವಾ ಒಂದು ಎಜುಕೇಷನ್‌ನಿನ ಸೌಭ್ಯವಾಗಲಿ ಉತ್ತಮ ಪಡಿಸುವುದಕ್ಕೆ ಈ ಒಂದು ವರದಿಯ ಆಧಾರದ ಮೇಲೆ ಅದಕ್ಕೆ ಸೌಲಭ್ಯಗಳನ್ನು ಕಲ್ಪಿಸುವುದಕ್ಕೆ ಅವಕಾಶ ಇದೆ. ನೀವು ಬಯಸುವ ರೀತಿಯಲ್ಲಿ ರಾಜ್ಯಾಂಗ ಬದ್ಧವಾಗಿ ಅವರಿಗೆ ಏನು ರಕ್ಷಣೆಯನ್ನು ಕೊಡಬೇಕೋ ಅದನ್ನು ಕೊಡುತ್ತೇವೆ. ಆ ಬಗ್ಗೆ ಜರೂರಾಗಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಅಧ್ಯಕ್ಷರೇ, ಶ್ರೀಮಾನ್ ನಾಗಣ್ಣನವರ ಮೂಲ ಪ್ರಶ್ನೆಗೆ ನರಿಯಾದ ಉತ್ತರ ಸಿಗಲಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಯಾವ ತರಹ ಉತ್ತರ ಹೇಳಿದರೂ ತೃಪ್ತಿಯಾಗುವುದಿಲ್ಲ.

ಶ್ರೀ ಎನ್. ರಾಚಯ್ಯ.—ನಾನು ಈಗಾಗಲೇ ಹೇಳಿದ್ದೇನೆ. ಅವರು ಈ ಬಗ್ಗೆ ಎಷ್ಟು ಕಾತುರರಾಗಿದ್ದಾರೋ ಅದಕ್ಕಿಂತಲೂ ನಾವು ಕಾತುರರಾಗಿದ್ದೇವೆ ಎಂದು ಮೊದಲೇ ಹೇಳಿದ್ದೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಅಧ್ಯಕ್ಷರೇ, ಏನಾದರೂ ಒಂದು ನಮಿತಿಯನ್ನು ಬಿಡಿಸುವುದಕ್ಕೆ ಸಾಧ್ಯವಿಲ್ಲದೇ ಇರುವಾಗ ಅಂತಹ ಸಂದರ್ಭದಲ್ಲಿ ಆ ಕೆಲಸವನ್ನು ಆಯೋಗದ ಮೇಲೆ ಹಾಕಿಬಿಡುವುದು ಅನಂತರ ಆ ಆಯೋಗವು ತನ್ನ ವರದಿ ಕೊಡಬೇಕಾದರೆ ಕೆಲವು ವರ್ಷ ತೆಗೆದುಕೊಳ್ಳುವುದು, ನಂತರ ಅದನ್ನು ಸರ್ಕಾರ ತೀರ್ಮಾನ ಮಾಡಬೇಕಾದರೆ ೦ ವರ್ಷ ತೆಗೆದುಕೊಳ್ಳುವುದು, ಈ ರೀತಿ ಆದರೆ ಹೇಗೆ ? ಅಧ್ಯಕ್ಷರೇ, ನಾನು ರಾಮನಗರ ಮತ್ತು ಇತರೆ ತಾಲ್ಲೂಕಿನ ಋಣ ಪರಿಹಾರದ ಬಗ್ಗೆ ಒಂದು ನೋಟೀಸ್ ಕೊಟ್ಟಿಸಿಕೊಟ್ಟಿದ್ದೇನೆ, ಅದನ್ನು ಯಾವಾಗ ತೆಗೆದುಕೊಳ್ಳುತ್ತೀರಿ ? ನಾನು ಕಳುಹಿಸಿಕೊಟ್ಟು ೩-4 ದಿವಸವಾಯಿತು. ಅದು ಅವರ ಗ್ರಾಮದಲ್ಲೇ ನಡೆದಿರತಕ್ಕಂಥಾದ್ದು. ಯಾವ ವಿಧವಾದಂಥಾ ತನಿಖೆ ವಿಚಾರಣೆಗೆಲ್ಲಿದೆ ಅಡವು ಇಟ್ಟ ಪದಾರ್ಥಗಳನ್ನು ಕನಿದುಕೊಂಡು ಹೋಗುರತಕ್ಕಂಥಾ ವಿಚಾರ ಕೇಳಿದ್ದೇನೆ.

ಅಧ್ಯಕ್ಷರು.—ಆ ಬಗ್ಗೆ ನಾಳೆ ಉತ್ತರ ತರಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ನುಮಾರು 25-30 ವರ್ಷದಲ್ಲಿ ಅಡುವು ಇಟ್ಟಿರುವ ಪದಾರ್ಥಗಳ ಬಗ್ಗೆ ಏನೂ ವಿಚಾರಣೆ ಇಲ್ಲದೆ ತೆಗೆದುಕೊಂಡು ಹೋಗುತ್ತಿದ್ದಾರೆ. ಇದು ಬಹಳ ಮುಖ್ಯವಾದ ವಿಷಯ.

ಅಧ್ಯಕ್ಷರು.—ಮಾನ್ಯ ಸದಸ್ಯರು ಕೊಟ್ಟಿರುವುದು ಈಗ ಒಂದು ಗಂಟೆಗೆ ಬಂದಿದೆ. ನಾಳೆ ತರಿಸೋಣ.

ಶ್ರೀ ಟಿ. ಆರ್. ಶಾಮಣ್ಣ.—ರೂಲ್ ನಂಬರ್ 312ರ ಪ್ರಕಾರ ನಾನು ಒಂದು ಮುಖ್ಯ ವಾದಂಥ ವಿಷಯವನ್ನು ಅಂದರೆ ಮಹಾವೀರ ಜಯಂತಿ ಬಗ್ಗೆ ಒಂದು ವಿಷಯವನ್ನು ಕಳುಹಿಸಿ ಕೊಟ್ಟಿದ್ದೇನೆ.

ಅಧ್ಯಕ್ಷರು.—ಈಗ ಮುಖ್ಯಮಂತ್ರಿಗಳು ಇಲ್ಲಿ. ಅವರು ಬಂದ ಮೇಲೆ ತಮ್ಮ ವಿಷಯವನ್ನು ತೆಗೆದುಕೊಳ್ಳೋಣ.

PAPERS LAID ON THE TABLE

Sri M. Y Ghorpade (Minister for Finance & Housing).—Madam. I beg to lay on the table the report of the Comptroller and Auditor General of India (Revenue Receipts) for the year 1974–75 as required under article 151 (2) of the Constitution of India.

Sri M. Mohammed Ali.— Madam, I beg to lay notification No. S. O. 714 dated 26th February 1976 regarding the exemption of tax on Passengers and Goods payable under the Act under sub-section (2) of the Karnataka Motor Vehicles (Taxation on Passengers and Goods) Act, 1961.

Sri S. M. Krishna (Minister for Industries and Parliamentary Affairs).—Madam, I beg to lay :

(i) 28th Annual Report of the Mysore Lac and Paint Works Ltd , Mysore for the year 1974–75;

(ii) the Annual Report of the Karnataka Small Industries Development Corporation Ltd., for the year 1974–75 under Section 619(A)(3) of the Companies Act, 1956.

Madam Speaker.—All the papers are laid on the Table.

Twenty Eighth Report of the Committee on Private Member's Bills and Resolutions

Sri B. P. Kadam (Deputy Speaker).—Madam, I beg to present the twenty eighth report of the Committee on Private Member's Bill's and Resolutions.

Madam Speaker.—The twenty eighth report of the Committee on Private Member's Bills and Resolution is presented.